■ ಹನಿ

# ರಾಜ್ಯಸಭೆಗೆ ವಿದಾಯ

ಮಿಥುನ್ ಚಕ್ರವರ್ತಿ ರಾಜ್ಯಸಭೆಗೆ ರಾಜೀನಾಮೆ ನೀಡಿದ್ದಾರೆ. 'ಆರೋಗ್ಯ ಸರಿಯಿಲ್ಲ, ರಾಜ್ಯಸಭೆಗೆ ಹೋಗಲು ಆಗುವುದಿಲ್ಲ' ಎಂದು ಕಾರಣ ನೀಡಿದ್ದಾರೆ. ರಾಜ್ಯಸಭೆಯ ಸದಸ್ಯತ್ವ ಇನ್ನೂ ಮೂರು ವರ್ಷಗಳ ಅವಧಿ ಬಾಕಿ ಇದ್ದಾಗಲೇ ರಾಜೀನಾಮೆ ನೀಡಿದ್ದು ಈಗಿನ ರಾಜಕೀಯದ ಹಿನ್ನೆಲೆಯಲ್ಲಿ ಸ್ವಾಗತಾರ್ಹ ಸಂಗತಿಯೇ. ಹಾಗೆ ನೋಡಿದರೆ ಮಿಥುನ್ ದಾದಾ ರಾಜ್ಯಸಭೆಗೆ ಹೋದದ್ದು ಕಡಿಮೆಯೇ. ರಾಜ್ಯಸಭೆಯಲ್ಲಿ ಅವರ ಅಟೆಂಡೆನ್ಸ್ ನೋಡಿದರೆ ಶೇಕಡಾ 10 ಮಾತ್ರ! ಸಾಮಾನ್ಯವಾಗಿ ಶೇಕಡಾ 70ಕ್ಕಿಂತ ಕಡಿಮೆ ಹಾಜರಾತಿ ಇದ್ದರೆ ಅವಮಾನದ ಸಂಗತಿ ಎಂದು ಎಲ್ಲರೂ ಭಾವಿಸುತ್ತಾರೆ. ಮಿಥುನ್ ದಾ ಗೆ ಅವಮಾನದ ಭಾವ ಅನುಭವಿಸಲೂ ಪುರುಸೊತ್ತಿಲ್ಲ. ಚಿತ್ರರಂಗದಲ್ಲಿ ಅಷ್ಟೊಂದು ಬ್ಯುಸಿ. ನಟ, ನಿರ್ಮಾಪಕ, ಗಾಯಕ, ಲೇಖಕ, ಉದ್ಯಮಿ, ರಾಜಕಾರಣಿ ಹೀಗೆ ಎಷ್ಟೊಂದು ಅವತಾರಗಳು! ಮುಂಬೈಯಲ್ಲೇ ಸೆಟ್ಲ್ ಆಗಿರುವ ಮಿಥುನ್ ದಾದಾ, ಕೋಲ್ಕತ್ತಾಗೆ ಹೋದದ್ದೂ ಕಡಿಮೆಯೇ. 2014ರಲ್ಲಿ ರಾಜ್ಯಸಭೆಯ ಸದಸ್ಯರಾಗಿ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್‌ನಿಂದ ಆಯ್ಕೆಯಾದ ಬಳಿಕ ಕೋಲ್ಕತ್ತಾಗೆ ಹೋದದ್ದು ಒಂದೇ ಬಾರಿ. ಅದೂ ದುರ್ಗಾಪೂಜೆಯ ಪೆಂಡಾಲ್ ಉದ್ಘಾಟನೆಗೆ.

ಇತ್ತೀಚಿನ ವರ್ಷಗಳಲ್ಲಿ ಸಿನಿಮಾ ನಟನೆಯೂ ಕಡಿಮೆಯೇ. ಆಗೊಮ್ಮೆ ಈಗೊಮ್ಮೆ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಸಿನಿಮಾಗಿಂತ ಹೆಚ್ಚು ಟಿವಿ ರಿಯಾಲಿಟಿ ಷೋ ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈಗ ಅನಾರೋಗ್ಯದ ಕಾರಣದಿಂದ ಅದೂ ನಿಂತುಹೋಗಿದೆ. ಅವರು ಗ್ರಾಂಡ್‌ಮಾಸ್ಟರ್ ಆಗಿದ್ದ ಡ್ಯಾನ್ಸ್ ಇಂಡಿಯಾ ಡ್ಯಾನ್ಸ್ ಸಾಕಷ್ಟು ಜನಪ್ರಿಯ ಟಿವಿ ಷೋ ಆಗಿತ್ತು. ಇತ್ತೀಚೆಗೆ ಮಂಡಿನೋವಿನ ಶಸ್ತ್ರಚಿಕಿತ್ಸೆಗೆ ಒಳಗಾದ ಬಳಿಕ ಮಿಥುನ್‌ರ ಎಲ್ಲ ಚಟುವಟಿಕೆಗಳಿಗೂ ಬ್ರೇಕ್ ಬಿದ್ದಿದೆ.



ಗೌರಾಂಗ್ ಚಕ್ರವರ್ತಿ ಎಂದರೆ ಈಗ ಯಾರಿಗೂ ಗೊತ್ತಾಗಲಿಕ್ಕಿಲ್ಲ. ಆ ಹೆಸರು ಸ್ವತಃ ಮಿಥುನ್ ಚಕ್ರವರ್ತಿಗೂ ನೆನಪಿರಲಿಕ್ಕಿಲ್ಲ. 70ರ ದಶಕದ ಆರಂಭದಲ್ಲಿ ಚಲನಚಿತ್ರ ರಂಗಕ್ಕೆ ಕಾಲಿಟ್ಟಾಗ ಗೌರಾಂಗ್ ಎಂಬ ಮೂಲ ಹೆಸರು ಬದಲಾಗಿ ಮಿಥುನ್ ಆಯಿತು. ಹುಟ್ಟಿದ್ದು (ಬರ್ತ್‌ಡೇ 1661950) ಆಗಿನ ಪಾಕಿಸ್ತಾನ, ಈಗಿನ ಬಾಂಗ್ಲಾಕ್ಕೆ ಸೇರಿರುವ ಬರಿಸಾಲ್ ಎಂಬ ಹಳ್ಳಿಯಲ್ಲಿ. ಬಾಲ್ಯದಲ್ಲೇ ರಂಗಭೂಮಿಯ ನಂಟು ಬೆಳೆಯಿತು. ಜತೆಗೆ ನಕ್ಸಲೀಯ ಚಳವಳಿಯ ಕುರಿತು ಸಹಾನುಭೂತಿಯೂ ಇತ್ತು. ಕೋಲ್ಕತ್ತಾದಲ್ಲಿ ಕೆಮಿಸ್ಟ್ರಿ ಪದವಿ ಪಡೆದ ಬಳಿಕ ಪುಣೆ ಫಿಲಂ ಇನ್ಸ್‌ಟಿಟ್ಯೂಟ್ ಸೇರಿದ. ಹೊಸ ಅಲೆಯ ಸಿನಿಮಾದಲ್ಲಿ ಅವಕಾಶ ಸಿಗುವುದು ತಡವಾಗಲಿಲ್ಲ.

1976ರಲ್ಲಿ ನಟಿಸಿದ ಮೊದಲ ಕಲಾತ್ಮಕ ಚಿತ್ರ 'ಮೃಗಯಾ' ಮಿಥುನ್‌ಗೆ ಅತ್ಯುತ್ತಮ ಅಭಿನಯಕ್ಕೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟಿತು. ಮೂರು ವರ್ಷಗಳ ಬಳಿಕ ಮಿಥುನ್ ಹಿಡಿದದ್ದು ಹೊರಳುದಾರಿ. 79ರಲ್ಲಿ ತೆರೆಗೆ ಬಂದ ಸುರಕ್ಷಾ ಎಂಬ ಚಿತ್ರ ಕಮರ್ಷಿಯಲ್ ನಾಯಕನ ಇಮೇಜ್ ಸೃಷ್ಟಿಸಿತು. ಆದರೆ ನಿಜಕ್ಕೂ ಮಿಥುನ್ ಹಿಂದೀ ಚಿತ್ರರಂಗದ ಚಕ್ರವರ್ತಿ ಎಂದನ್ನಿಸಿದ್ದು 'ಡಿಸ್ಕೊ ಡ್ಯಾನ್ಸರ್' ಚಿತ್ರದ ಮೂಲಕ. ಡಿಸ್ಕೊ ನೃತ್ಯಕ್ಕೆ ದೇಶೀ ಹೆಜ್ಜೆಗಳನ್ನು ಹೊಂದಿಸಿ ಕುಣಿದ ಮಿಥುನ್, ಡ್ಯಾನ್ಸಿಂಗ್ ಸ್ಟಾರ್ ಎಂದೇ ಹೆಸರು ಪಡೆದ. ಈ ಚಿತ್ರ ರಷ್ಯಾದಲ್ಲೂ ಅತೀವ ಜನಪ್ರಿಯತೆ ತಂದುಕೊಟ್ಟಿತು. ಆ ಬಳಿಕ ತೆರೆಗೆ ಬಂದ 'ಪ್ಯಾರ್ ಜುಕ್ತಾ' ನಹೀ ಎಂಬ ಚಿತ್ರ ಬಾಕ್ಸಾಫೀಸ್ ನಲ್ಲಿ ಹೊಸ ದಾಖಲೆ ನಿರ್ಮಿಸಿತು. ಜನಪ್ರಿಯತೆಯಲ್ಲಿ ಮಿಥುನ್ ಆಗ ಅಮಿತಾಭ್ ಬಚ್ಚನ್‌ನನ್ನೂ ಹಿಂದಿಕ್ಕಿದ್ದು ದೊಡ್ಡ ಸುದ್ದಿಯಾಯಿತು.

ಬಂಗಾಳಿ, ಹಿಂದಿ ಮಾತ್ರವಲ್ಲ ಒರಿಯಾ, ಬೋಜ್‌ಪುರಿ, ತೆಲುಗು, ಪಂಜಾಬಿ ಚಿತ್ರಗಳಲ್ಲೂ ನಟಿಸಿರುವ ಮಿಥುನ್ ದಾದಾ, ಚಲನಚಿತ್ರ ರಂಗದಲ್ಲಿ ಕಾರ್ಮಿಕರ ಸಂಘ ಕಟ್ಟಿ ಅವರ ಏಳಿಗೆಗಾಗಿ ಶ್ರಮಿಸಿದ್ದರು. ನಾಲ್ಕು ದಶಕಗಳ ವೃತ್ತಿಜೀವನದಲ್ಲಿ 350 ಸಿನಿಮಾ ಎಂದರೆ ಕಡಿಮೆ ಸಾಧನೆಯೇನಲ್ಲ. ಮೊನಾರ್ಕ್ ಹೋಟೆಲ್ ಮತ್ತು ವಿದ್ಯಾಸಂಸ್ಥೆಗಳ ಮೂಲಕ ಉದ್ಯಮರಂಗದಲ್ಲೂ ಹೆಸರು ಮಾಡಿದ್ದಾರೆ.

6 ಅಡಿ ಎತ್ತರದ ಸ್ಫುರದ್ರೂಪಿ ನಟ ಮಿಥುನ್, ಅಭಿನಯದಂತೆಯೇ ವೈಯಕ್ತಿಕ ಜೀವನದ ಪ್ರೇಮಪ್ರಕರಣಗಳಲ್ಲೂ ದೊಡ್ಡ ಸುದ್ದಿ ಮಾಡಿದ್ದರು. ಹಿಂದಿ ಚಿತ್ರರಂಗದ 'ಅಂದಕಾಲತ್ತಿಲ್ ಸುಂದರಿ' ಯೋಗಿತಾ ಬಾಲಿಯನ್ನು ಪ್ರೇಮಿಸಿ ಕೈಹಿಡಿದರು. ಆ ಬಳಿಕ ಹಿಂದಿ ಚಿತ್ರರಂಗದ ಒಂದು ಕಾಲದ 'ನಂಬರ್ ಒನ್' ನಟಿ ಶ್ರೀದೇವಿ ಜತೆಗೆ ಗುಟ್ಟಾಗಿ ಮದುವೆಯಾದದ್ದು ಭಾರೀ ಗದ್ದಲ ಸೃಷ್ಟಿಸಿತು. ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಸಂದಿಗ್ಧ ಎದುರಾದಾಗ ಮಿಥುನ್ ಅಂಟಿಕೊಂಡದ್ದು ಯೋಗಿತಾ ಬಾಲಿಗೇ. ಹಾಗೆಂದು ಪ್ರೇಮ ಅಲ್ಲಿಗೇ ನಿಲ್ಲಲಿಲ್ಲ. ಮಾಡೆಲಿಂಗ್ ಮಾಡುತ್ತಿದ್ದ ಹೆಲೆನಾ ಲೂಕ್ ಜತೆಗೂ ಪ್ರಕರಣವೊಂದು ಸುದ್ದಿ ಮಾಡಿತು. ಕೆಲವು ವರ್ಷಗಳಲ್ಲಿ ಅದೂ ಕೊನೆ ಕಂಡಿತು.

ಇನ್ನೂ 65ರ ಹರೆಯದಲ್ಲಿರುವ ಮಿಥುನ್ ದಾದಾ ರಾಜ್ಯಸಭೆಗೆ ರಾಜೀನಾಮೆ ಕೊಟ್ಟದ್ದು ಅಭಿಮಾನಿಗಳಿಗೆ ನಿರಾಶೆ ಹುಟ್ಟಿಸಿದ್ದು ಸಹಜವೇ. ಅದಕ್ಕೆ ಅನಾರೋಗ್ಯಕ್ಕಿಂತ ಮುಖ್ಯವಾಗಿ ರಾಜಕೀಯವೇ ಅದಕ್ಕೆ ಕಾರಣ ಎನ್ನುವವರೂ ಇದ್ದಾರೆ. ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಕೋಲಾಹಲ ಉಂಟು ಮಾಡಿದ ಶಾರದಾ ಚಿಟ್‌ಫಂಡ್ ಹಗರಣದಲ್ಲಿ ಮಿಥುನ್ ಅವರ ಹೆಸರೂ ತಳುಕು ಹಾಕಿಕೊಂಡಿದೆ ಎನ್ನುವುದು ಸುದ್ದಿ. ರಾಜ್ಯಸಭೆಯಲ್ಲಿ ಈ ಚಿಟ್‌ಫಂಡ್ ವಿಷಯದಲ್ಲಿ ವಾಗ್ಯುದ್ಧ, ಗದ್ದಲ ನಡೆದಾಗ ಮಿಥುನ್ ದಾದಾ ಕೂಡ ಸಕ್ರಿಯವಾಗಿ ಭಾಗವಹಿಸಿದ್ದರು. ಈ ಹಗರಣಕ್ಕೆ ಸಂಬಂಧಿಸಿ ಸಾರಿಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಮದನ್ ಮಿತ್ರಾರನ್ನು ಬಹಿರಂಗವಾಗಿ ಬೆಂಬಲಿಸಿದ್ದರು. ಈ ಹಗರಣದ ಆರೋಪಗಳನ್ನು ತಾಳಲಾಗದೇ ರಾಜಕೀಯದ ಸಹವಾಸವೇ ಬೇಡ ಎಂದು ಮಿಥುನ್ ನಿರ್ಧರಿಸಿದರು ಎನ್ನುವುದು ನಿಕಟವರ್ತಿಗಳ ಅನಿಸಿಕೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65